ಬೇರೆ ಚಡ್ಡಿಯಿಲ್ಲದಾಗ ಹುಟ್ಟುಡುಗೆಯಲ್ಲಿಯೇ ತುಂಬಿದ ತೆರೆದ ಬಾವಿಗೆ ಮನಸೋ ಇಚ್ಛೆ ಜಿಗಿದು ಈಜಿ, ದಂಡೆಯಲ್ಲಿ ಬಿಚ್ಚಿಟ್ಟಿರುತ್ತಿದ್ದ ಅವೇ ಬಟ್ಟೆ ತೊಟ್ಟು ನಡೆಯುತ್ತಿದ್ದರು. ಅಲ್ಲೇ ಮೆಟ್ಟಿಲ ಮೇಲೆ ಬಟ್ಟೆ ತೊಳೆಯುತ್ತಿದ್ದ ಹೆಂಗಸರ್‍ಯಾರೂ ಅದಕ್ಕೆ ಅಸಹ್ಯಪಡುತ್ತಿದ್ದಿಲ್ಲ. ಅದೇನು ತಾವು ನೋಡಲಾರದ ಪ್ರಪಂಚವಾ! 'ಬರುವಾಗ ಬೆತ್ತಲೆ ಹೋಗುವಾಗ ಬೆತ್ತಲೆ' ಎಂದು ರಾತ್ರಿ ಹೊತ್ತಲ್ಲಿ ಭಜನಾಮಂಡಳಿ ಹಾಡುವ ಹಾಡನ್ನು ಅವರು ಅರ್ಥ ಮಾಡಿಕೊಂಡಿದ್ದರು.

ಅದೆಂಥಾ ಯೋಗಾಯೋಗ! ಬಾಲ್ಯದಲ್ಲಿ ಹಾಗೆ ಮನೆಗೆಲಸ ಮತ್ತು ಈಜಾಟಗಳ ದೇಹ ದಂಡನೆಯೇ ನಮ್ಮನ್ನು ಈಗಲೂ ಆರೋಗ್ಯವಂತರಾಗಿ ಇಟ್ಟಿರುವುದು. ಆಧುನಿಕ ನಾಗರಿಕ ಜಗತ್ತಿನ ಯೋಗಾಸನಗಳಂಥ ಕೃತಕ ದೇಹ ದಂಡನೆಯ ಉಸಾಬರಿಯೇ ನಮಗೆ ಬೇಕಾಗಲಿಲ್ಲ. 'ದೇಹ ದಂಡನೆ' ನಿಸರ್ಗ ವಿಧಿಸಿದ ನಿಯಮ. ಅದುವೇ ದೇಹಾರೋಗ್ಯವನ್ನು ಕಾಪಾಡಬಲ್ಲುದು ನಿಡುಗಾಲ.

ದಂತಕ್ಷಯ, ದಂತಮಜ್ಜನ ಎಂಬುದು ಸಂಸ್ಕೃತ ಶಬ್ದಗಳು. ವಿಶೇಷವಾಗಿ ಆಯುರ್ವೇದ ವೈದ್ಯ ಚಿಕಿತ್ಸೆಯಲ್ಲಿ ಬಳಕೆಯಲ್ಲಿರುವ ಪದಗಳು. ಗದುಗಿನಿಂದ ಬರುತ್ತಿದ್ದ ಮುದುಕ 'ದಂತಮಂಜನ' ಎಂಬ ಹಲ್ಲುಪುಡಿ ಪಾಕೀಟುಗಳನ್ನು ಆರು ಪೈಸೆಗೊಂದರಂತೆ ಮಾರುತ್ತಿದ್ದರು. ಆದರೆ, ಎರಡು ರುಪಾಯಿಯಲ್ಲಿ ಇಡೀ ಸಂತೆಯನ್ನೇ ಮುಗಿಸುತ್ತಿದ್ದವರಿಗೆ ಆರು ಪೈಸೆಯೂ ದೊಡ್ಡದೇ ಆಗ. ಹೀಗಾಗಿ, ಸ್ಥಳೀಯರು ಕಟ್ಟಿಗೆ ಒಲೆಯ ಇದ್ದಿಲನ್ನೇ ಪುಡಿಮಾಡಿ ಹಲ್ಲುಜ್ಜಲು ಬಳಸುತ್ತಿದ್ದದ್ದು ಹಲ್ಲಜ್ಜಲು ಇನ್ನೊಂದು ಸೌಕರ್ಯವಿತ್ತು ಕೇಳಿ. ಕಾಕುಳ್ಳಿನ ಕೆಂಡವನ್ನು ಉರಿಸಿ ಆರಿಸಿದ ಬನ್ ಆಕಾರದ ಮಸಿತುಂಡನ್ನು ಹಿರಿಯರು ತೆಂಗಿನ ಚಿಪ್ಪಿನಲ್ಲಿ ಬಚ್ಚಲ ಮನೆಯಲ್ಲಿ ಅಲಂಕಾರಪ್ರಾಯವಾಗಿ ಇಟ್ಟಿರುತ್ತಿದ್ದರು. ಮನೆಯ ಹೆಂಗಸರು–ಮಕ್ಕಳಿಗೆ ಅದೇ ದಿವಿನಾದ ದಂತಚೂರ್ಣ.

'ಹಲ್ಲು ನಾಲಿಗೆಯೊಳಗೊ, ನಾಲಿಗೆಯು ಹಲ್ಲೊಳಗೋ? ಹಲ್ಲು–ನಾಲಿಗೆಯೆರಡೂ ಬಾಯಿಯೊಳಗೊ ಹರಿಯೆ'! ಏನೂ ಹರಿಯಲಾಗದವರು ಹಾಗೆ ಬಾಯಿ ಹರಿ ಬಿಡುತ್ತಾರೆ – ಎಂದು ಜನಪದರ ಅಂಬೋಣ. ಅದನ್ನೇ 'ನಾಲಿಗೆ ವ್ಯಕ್ತಿಯ ಸಂಸ್ಕೃತಿಯನ್ನು ಹೇಳುತ್ತದೆ' ಎನ್ನುತ್ತಾರೆ. ನಾಲಿಗೆ ಹದ್ದುಬಸ್ತಿಲ್ಲಿಟ್ಟುಕೊಳ್ಳದಿದ್ದರೆ ಏನೆಲ್ಲ ಅವಘಡಗಳಿಗೆ ಕಾರಣರಾಗುತ್ತಾರೆ. ಹಲ್ಲು–ನಾಲಿಗೆ ಎರಡೂ ಜಿದ್ದಿಗೆ ಬಿದ್ದರೆ ಹೇಗಿರುತ್ತದೆ? 'ನಾನು ಒಂದೇ ಒಂದು ಆಡಬಾರದ ಮಾತು ಆಡಿದರೆ ಸಾಕು, ಮುಂದಿದ್ದ ನೀವೆಲ್ಲ ಒಂದೇಟಿಗೇ ಉದುರಿ ಬೀಳುತ್ತೀರಿ' ಎಂದು ನಾಲಿಗೆ ಜಂಭ ಕೊಚ್ಚಿಕೊಳ್ಳದಿದ್ದರೆ; ಘಟಾನುಘಟಿಗಳಾದ ಹಲ್ಲುಗಳೋ 'ನಮ್ಮ ಅಡಿ ಸಿಕ್ಕರೆ ನೀನು ನುಚ್ಚು ನೂರು ಹುಷಾರು' ಎಂದು ಎದೆ ತಟ್ಟಿಕೊಳ್ಳುತ್ತವೆ. ಆದರೆ, ಚುರುಕಾದ ನಾಲಿಗೆ ಆ ಮೂವತ್ತೆರಡು ಜನಗಳೊಟ್ಟಿಗೇ ಇದ್ದರೂ ಅದರಡಿ ಸಿಕ್ಕದಂತೆ ಎಂಥಾ ಚಾಣಾಕ್ಷತನದಿಂದ ಬದುಕಿ ಬಾಳುತ್ತದಲ್ಲವೆ? ಅದೇ ಪ್ರಕೃತಿ ನಿಯಮ!

ವಾಸ್ತವವಾಗಿ 'ಹಲ್ಕಾ' ಎನ್ನುವ ಪದ ಮೂಲ ಭಾಷೆ ಹಿಂದಿಯಿಂದ ಬಂದದ್ದು. ಹಲ್ಕಾ ಎಂದರೆ ಹಗುರವಾದುದು, ಮೃದುವಾದುದು ಎಂದರ್ಥ. ಯಾವನು ಹಗುರವಾಗಿ ಮಾತನಾಡುವನೋ ಅವನು ನಾಲಿಗೆ ಹರಿಬಿಡುವವ, ಬಾಯಿಹರುಕ. ಈ ಪದವು ಹಲ್ಕಾ ಎಂದೂ, ಅನಂತರ ಚಿಕಿತ್ಸಾತ್ಮಕವಾಗಿ 'ಹಲ್ಕಟ್ಟ' ಎಂದೂ ಆಡುಮಾತಿನಲ್ಲಿ ಬದಲಾಯಿತು. ವಾಸ್ತವವಾಗಿ ಮೇಲುನೋಟಕ್ಕೆ ಅದಕ್ಕೆ ಅಶ್ಲೀಲದ ಆರೋಪವಿದ್ದರೂ, ಹಗುರ ವ್ಯಕ್ತಿತ್ವದ, ನೀಚ ಎಂದಷ್ಟೇ ಅರ್ಥ. ಕಾಲೇಜಿಗೆ ಹೋಗುವ ಹದಿಹರೆಯದ ಹುಡುಗಿಯರ ಗುಂಪಿನಲ್ಲಿ ಒಬ್ಬಳು 'ಅವನು ನೋಡೆ ಹರಿದು ತಿನ್ನೋ ಹಂಗ ನೋಡ್ತಾನ... ನನ್ನ ಮೈಮೇಲೆಲ್ಲ ಕಣ್ಣು ಹರಿ ಬಿಟ್ಟು, ಥೂ ಹಲ್ಕಾ...!' ಎಂದು ಆರೋಪಿಸಿದಾಕ್ಷಣ ಅವನು ಕಚ್ಚೆಹರುಕ ಎಂಬಂತೆ ಗಂಭೀರವಾಗಿ ಭಾವಿಸಬಾರದು. ತುಸು ಚಪಲ ಚೆನ್ನಿಗರಾಯ ಅಷ್ಟೇ! ವಾರಪತ್ರಿಕೆಯೊಂದು 'ಥೂ ಹಲ್ಕಾ' ಎಂಬ ಅಂಕಣವನ್ನು ಪ್ರಕಟಿಸುತ್ತಿತ್ತು – ಊಟದ ತಾಟಿನಲ್ಲಿ ಬಡಿಸುವ ಮಸಾಲೆ ಉಪ್ಪಿನಕಾಯಿಯಂತೆ! 'ಹೀಗೂ ಉಂಟೇ' ಅನ್ನಬೇಕಷ್ಟೇ!

ಹಲ್ಲು ಕಟ್ಟುವ ಡಾಕ್ಟರನನ್ನು ಸಂಕ್ಷೇಪಿಸಿ 'ಹಲ್ಕಟ್ಟು ಡಾಕ್ಟರು' ಎಂದೇನಾದರೂ ಆಡುಮಾತಿನಲ್ಲಿ ಕರೆದರೆ ನಿಮ್ಮ ಹಲ್ಲುಗಳೇ ಉದುರಿಬಿದ್ದಾವು.